# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ 05/08/2022 ರಂದು ನಡೆದ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು

## ವಾರ್ಡ್ 77 ದತ್ತಾತ್ರೇಯ ದೇವಸ್ಥಾನದ ಸಭೆಯ ನಡವಳಿಗಳು

ಸಭೆಯನ್ನು ಪ್ರಾರಂಭಿಸುತ್ತಾ ಸಭೆಗೆ ಹಾಜರಿದ್ದ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರಿಗೆ ನೋಡಲ್ ಅಧಿಕಾರಿಗಳು ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು. ಈ ಕೆಳಕಂಡಂತೆ ಚರ್ಚಿಸಿ ನಿರ್ಣಯಿಸಲಾಯಿತು.

1. ಹಾಜರಿದ ಅಧಿಕಾರಿಗಳು:
   - ಜ್ಯೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್
   - ಬಿ. ಡಬ್ಲ್ಯೂ.ಎಸ್.ಎಸ್.ಬಿ ಇನ್ಸ್‌ಪೆಕ್ಟರ್
   - ಸಿನಿಯರ್ ಹೆಲ್ತ್ ಇನ್ಸ್‌ಪೆಕ್ಟರ್
   - ರೆವೆನ್ಯೂ ಅಧಿಕಾರಿಗಳು
   - ಎಸ್. ಡಬ್ಲ್ಯೂ.ಡಿ ಅಧಿಕಾರಿಗಳು
2. ಹಿಂದಿನ ಸಭೆಯ ನಡುವಳಿಯನ್ನು ಸಭೆಯಲ್ಲಿ ಚರ್ಚಿಸಿದಂತೆ ಸೂಕ್ತ ಕ್ರಮವಹಿಸಲು ಸಭೆಗೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟವರಿಗೆ ತಿಳಿಸಿದರು.
3. ವಿದ್ಯುತ್ ದೀಪ ನಿರ್ವಹಣೆ ಮತ್ತು ಪೋಲೀಸ್ ಇಲಾಖೆಗೆ ಸಂಬಂಧ ಪಟ್ಟ ಅಧಿಕಾರಿಗಳು ಹಾಜರಿರುವುದಿಲ್ಲ.
4. ನಾಗಪ್ಪ ರಸ್ತೆಯಲ್ಲಿ ಸುಮಾರು ಪಾಟ್ ಹೋಲ್ಸ್‌ಗಳು ಇರುತ್ತವೆ ಸಾರ್ವಜನಿಕರು ವಾಹನಗಳಲ್ಲಿ ಹೋಗುವಾಗ ಹಾಯತಪ್ಪಿ ಬೀಳುತ್ತಾರೆ ಎಂದು ಸಾರ್ವಜನಿಕರು ಸಭೆಯ ಗಮನಕ್ಕೆ ತಂದರು ಕಾರ್ಯದರ್ಶಿಯವರು ಕೂಡಲೆ ಪಾಟ್‌ಹೋಲ್ಸ್‌ಳನ್ನು ಮುಚ್ಚಲು ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.
5. ಸಿನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ರವರು ಮಾತನಾಡುತ್ತ ಕೋವಿಡ್ ನಿಯಂತ್ರಣ ನಮ್ಮ ವಾರ್ಡ್‌ನಲ್ಲಿ ಸುದಾರಿಸುತ್ತಿದೆ ಹಾಗೆಯೆ ಸೊಳ್ಳೆಯ ನಿಯಂತ್ರಣಕ್ಕೆ ಔಷಧಿಯನ್ನು ಸಿಂಪಡಣೆ ಮಾಡಿ ಸೊಳ್ಳೆ ನಿಯಂತ್ರಣ ಮಾಡಲು ಕ್ರಮವಹಿಸಲಾಗಿದೆ ಎಂದು ಸಭೆಗೆ ತಿಳಿಸಿದರು.
6. ಮುನೇಶ್ವರ ಮುಖ್ಯ ರಸ್ತೆಯಲ್ಲಿ ಸಾರ್ವಜನಿಕರಿಗೆ ನೀರಿನ ಸಮಸ್ಯೆ ಉಂಟಾಗಿದ್ದು ಒಂದು ಬೋರ್ ವೆಲ್ ಮತ್ತು ಪೈಪ್ ಲೈನ್ ವ್ಯವಸ್ಥೆ ಮಾಡಲು ಸಾರ್ವಜನಿಕರು ಸಭೆಗೆ ಕೋರಿದರು. ನೋಡಲ್ ಅಧಿಕಾರಿಗಳು ಪರಿಶೀಲಿಸಿ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.
7. ಜಿಯೋ ದವರು ಹಗೆದು ಸ್ವಚ್ಚತೆ ಮಾಡದೆ ಪಾಟ್ ಹೋಲ್ಸ್ ಗಳನ್ನು ಮುಚ್ಚದೆ ಇರುವುದು ಕಂಡುಬಂದಿರುತ್ತದೆ ಆದ್ದರಿಂದ ಸದರಿಯವರನ್ನು ಕೆಲಸ ಮಾಡಲು ಬಿಡಬಾರದೆಂದು ಸಭೆಯಲ್ಲಿದ್ದ ಸದಸ್ಯರು ತಿಳಿಸಿದರು.

**ನೋಡಲ್ ಅಧಿಕಾರಿಗಳು**
**ವಾರ್ಡ್ ಸಂ.77,**
**ದತ್ತಾತ್ರೇಯ ದೇವಸ್ಥಾನ ವಾರ್ಡ್**